ಸಿಕ್ಕಿಬಿದ್ದಾಗ ಅವನ ಬಗ್ಗೆ ನಮ್ಮವರು ನಿಗಾ ಇಟ್ಟಿದ್ದರು. ಅವನ ಹೆಸರು ಗುರುನಾಥನ್ ಎಂದು. ಅವನು ವೀರಪ್ಪನ್ ಗುಂಪಿನ ಬಹಳ ಪ್ರಮುಖವಾದ ವ್ಯಕ್ತಿ ಎಂದು ನಮ್ಮ ಟಾಸ್ಕ್ ಫೋರ್ಸ್‌ಗೆ ವರದಿ ಬಂದನಂತರ ಈ ಕೆಲಸವನ್ನು ಮಾಡಿದ್ದಾರೆ. ಆದರೆ ಅವನು ತಪ್ಪಿಸಿಕೊಂಡು ಹೋಗುವಂಥ ಸಂದರ್ಭದಲ್ಲಿ ಅನಿವಾರ್ಯವಾಗಿ ಅವನಮೇಲೆ ಗುಂಡು ಹಾರಿಸಿ ಜೀವ ತೆಗೆಯಬೇಕಾಗಿ ಬಂತು. ನಮ್ಮ 3 ರಾಜ್ಯಗಳ ಟಾಸ್ಕ್ ಫೋರ್ಸ್ ಏನಿತ್ತು ಅದು ತನ್ನ ಕಾರ್ಯಾಚರಣೆಯನ್ನು ಮಾಡಲೇಬೇಕಾಯಿತು.

ಅಂದರೆ ಈಗಾಗಲೇ ಅದರ ಬಗ್ಗೆ ಸಂಪೂರ್ಣವಾದ ಸುಳಿವು, ಮಾಹಿತಿ ನಮಗೆ ಬಂದಿದೆ. ಅದರಲ್ಲಿ ನಮ್ಮವರು ನಿರತರಾಗಿದ್ದಾರೆ.

ಮಾನ್ಯ ಸಭಾಧ್ಯಕ್ಷರೆ, ಇನ್ನು ಒಂದೇ ಒಂದು ಮಾತನ್ನು ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ. ವಿವರವಾಗಿರತಕ್ಕಂಥ ವಿಚಾರವನ್ನು ಈ ಸದನದಲ್ಲಿ ಮಾಡಿದಷ್ಟೂ ಒಳ್ಳೆಯದಲ್ಲ ಎನ್ನತಕ್ಕ ಅಭಿಪ್ರಾಯವನ್ನು ಈ ಟಾಸ್ಕ್ ಫೋರ್ಸ್ ವ್ಯಕ್ತ ಮಾಡಿದೆ. ಅವರು ತೀವ್ರವಾಗಿ ಕಾರ್ಯಾಚಾರಣೆಯಲ್ಲಿದ್ದಾರೆ. ಆದರೆ ಇದರ ಬಗ್ಗೆ ಚರ್ಚೆಯನ್ನು ಮೊಟಕು ಮಾಡಬೇಕೆಂದು ನಾನು ಹೇಳುತ್ತಿಲ್ಲ. ಇದು ನಾಳೆ ಪತ್ರಿಕೆಗಳಲ್ಲಿ ಬರಬಾರದೆಂಬ ದೃಷ್ಟಿಯಿಂದ ಅವರೇ ಹೇಳಿದ್ದಾರೆ. ಇಷ್ಟು ಮಾತನ್ನು ಹೇಳಿ ಇನ್ನೂ ಕೆಲವು ವಿಚಾರಗಳೇನಾದರೂ ಪ್ರಸ್ತಾಪ ಮಾಡುವುದಿದ್ದರೆ ಅದನ್ನು ಖಾಸಿಗಯಾಗಿ ಮಾತನಾಡೋಣ.

ಶ್ರೀ ವಾಟಾಳ್ ನಾಗರಾಜ್ : ಇದರ ಬಗ್ಗೆ ನಮ್ಮ ಬಾಯಿ ಮುಚ್ಚಿದೆ. ಕಾರಣ ಏನೆಂದರೆ ಗಮನಸೆಳೆಯುವ ಸೂಚನೆಯಲ್ಲಿ ನಾವು ಏನನ್ನೂ ಮಾತನಾಡುವಂತಿಲ್ಲ, ಆದರೆ ಇದನ್ನು ನಾವು ಸಮಗ್ರವಾಗಿ ಚರ್ಚೆಮಾಡಬೇಕಾಗುತ್ತದೆ.

ಅಧ್ಯಕ್ಷರು : ಈಗ ಸಭೆ ಮುಂದುವರಿದು ಮತ್ತೆ ಮಧ್ಯಾಹ್ನ 2.30 ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸಭೆಯು ಮತ್ತೆ 2.30 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

(ಸದನವು ಮಧ್ಯಾಹ್ನ 2.45 ನಿಮಿಷಕ್ಕೆ ಸಮಾವೇಶಗೊಂಡಿತು ಉಪಾಧ್ಯಕ್ಷಿಣಿಯವರಾದ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಪೀಠವನ್ನು ಅಲಂಕರಿಸಿದರು)

ನಿಯಮ 334ರ ಮೇರೆಗೆ

(1) ದಕ್ಷಿಣ ಕನ್ನಡ ಜಿಲ್ಲೆಯ ಖಾಸಗೀ ಪ್ರೌಢಶಾಲೆಗಳಿಗೆ ಮಾನ್ಯತೆ ನೀಡುವುದು.

ಶ್ರೀ ಎ.ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಉಪಾಧ್ಯಕ್ಷಿಣಿಯವರೇ, ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತು ತನ್ನ ನಿರ್ಣಯದ ಸಂಖ್ಯೆ 7(4) ದಿನಾಂಕ 4.6.88ರಲ್ಲಿ ವಿದ್ಯಾ ಸಮಿತಿಯ ದಿನಾಂಕ 23.5.88ರ ಶಿಫಾರಸ್ಸಿನಂತೆ ದಕ್ಷಿಣ ಕನ್ನಡ ಜಿಲ್ಲೆಯ ಎಂಟು ಸ್ಥಳಗಳಲ್ಲಿ 1988-89ನೇ ಸಾಲಿನಲ್ಲಿ ಹೊಸ ಖಾಸಗಿ ಪ್ರೌಢಶಾಲೆಗಳನ್ನು ತೆರೆಯಲು ಅನುಮತಿ ನೀಡಿತ್ತು. ಅದೇ ರೀತಿ ಅದೇ ವರ್ಷ ಜಿಲ್ಲಾ ಪರಿಷತ್ತು ಕೇಂದ್ರ ಸರ್ಕಾರಿ ಪ್ರೌಢಶಾಲೆಗಳನ್ನು ತೆರೆಯಲು ಕೂಡ ಅನುಮತಿ ನೀಡಿತ್ತು. ಆದರೆ, ಸರ್ಕಾರಿ ಪ್ರೌಢಶಾಲೆಗಳಿಗೆ ಕರ್ನಾಟಕ ಸರ್ಕಾರ ಮಂಜೂರಾತಿ ಮತ್ತು ಮಾನ್ಯತೆ ನೀಡಿದೆ. ಖಾಸಗಿ ಪ್ರೌಢಶಾಲೆಯು ಎಲ್ಲಾ ಪ್ರೌಢಶಾಲೆಗಳ ರೀತಿಯಲ್ಲಿ ಕಾರ್ಯ ಮಾಡುತ್ತಿದ್ದರೂ ಸರ್ಕಾರದಿಂದ ಮಂಜೂರಾತಿ

ಮತ್ತು ಮಾನ್ಯತೆ ಇನ್ನೂ ಸಿಕ್ಕಿಲ್ಲ. ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತು ವಿದ್ಯಾಂಗ ಉಪ ನಿರ್ದೇಶಕರಿಂದ ಖಾಸಗಿ ಪ್ರೌಢಶಾಲೆಗಳಲ್ಲಿ 1988-89,89-90, 90-91 ಮತ್ತು 91-92 ರವರೆಗೆ ತರಗತಿಗಳನ್ನು ತೆರೆಯಲು ಅನುಮತಿ ಮತ್ತು ಮಾನ್ಯತೆ ನೀಡಿದೆ. ಕರ್ನಾಟಕ ಸರ್ಕಾರದ ಸಚಿವಾಲಯದಿಂದ ಹೊರಟಿರುವ ಪತ್ರ ಸಂಖ್ಯೆ ಇಡಿ 274 ಎಸ್‌ಇಎಸ್ 91 ದಿನಾಂಕ 18.9.91ರಂತೆ ಪ್ರೌಢಶಾಲೆಗಳಿಗೆ ಸರ್ಕಾರದಿಂದ ಖಾಯಂ ಅನುಮತಿ ಮತ್ತು ಮಾನ್ಯತೆ ನೀಡಬೇಕಾದರೆ ಕೆಲವು ಷರತ್ತುಗಳನ್ನು ಒಪ್ಪಿ 10 ರೂಪಾಯಿಗಳ ಛಾಪಾ ಕಾಗದದಲ್ಲಿ ಶಾಶ್ವತವಾಗಿ ಸರಕಾರದಿಂದ ಅನುದಾನ ಬಯಸುವುದಿಲ್ಲವೆಂದು ಬರೆದುಕೊಡಬೇಕೆಂದು ತಿಳಿಸಿದೆ. ಇದರಿಂದ ಅಂತಹ ಸಂಸ್ಥೆಗಳಲ್ಲಿ 3-4 ವರ್ಷಗಳಿಂದ ಸತತವಾಗಿ ದುಡಿಯುತ್ತಿರುವ ಶಿಕ್ಷಕರಿಗೆ ಆ ಆದೇಶದ ಪ್ರಕಾರ ಯಾವುದೇ ಸೇವಾ ಭದ್ರತೆಯೂ ಇಲ್ಲದಂತಾಗಿರುವುದರಿಂದ, ಶಿಕ್ಷಕರು ತುಂಬಾ ಗೊಂದಲದಲ್ಲಿದ್ದಾರೆ. ಆದ್ದರಿಂದ, ಜಿಲ್ಲಾ ಪರಿಷತ್ತಿನ ಅನುಮೋದನೆಯಂತೆ 7 ವರ್ಷಗಳ ಅವಧಿಯ ನಂತರವಾದರೂ ಇಂತಹ ಸಂಸ್ಥೆಗಳಿಗೆ ಅನುದಾನ ನೀಡಿ ಶಿಕ್ಷಕ ಮತ್ತು ಶಿಕ್ಷಕೇತರರಿಗೆ ಸೇವಾ ಸೌಲಭ್ಯಗಳು ಸಿಗುವಂತೆ ಮತ್ತು ಈ ಮಾನ್ಯತೆ ಮತ್ತು ಅನುಮತಿಯನ್ನು ದಕ್ಷಿಣ ಕನ್ನಡದಲ್ಲಿ ಇದೇ ದಿ.29.2.92ರಂದು ನಡೆಯುವ ವಿಭಾಗಮಟ್ಟದ ಶಿಕ್ಷಣ ಯಜ್ಞದಲ್ಲಿ ಪ್ರಕಟಿಸಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿ ಸರ್ಕಾರವನ್ನು ತಮ್ಮ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಬಿ. ಶಿವಣ್ಣ (ಸಮಾಜಕಲ್ಯಾಣ ಸಚಿವರು, ವಿದ್ಯಾ ಮಂತ್ರಿಗಳ ಪರವಾಗಿ) : ಮಾನ್ಯ ಉಪಾಧ್ಯಕ್ಷೆಯವರೆ, ದಕ್ಷಿಣ ಕನ್ನಡ ಜಿಲ್ಲೆಯಿಂದ ಖಾಸಗಿ ಪ್ರೌಢಶಾಲೆ ಪ್ರಾರಂಭಿಸಲು ಅನುಮತಿ ಕೋರಿ 38 ಪ್ರಸ್ತಾವನೆಗಳು ಬಂದಿದ್ದವು. ಈ ಪ್ರಸ್ತಾವನೆಗಳನ್ನು ಪರಿಶೀಲಿಸಿದ ಪರಾಮರ್ಶಕ ಸಮಿತಿಯು 1991-92ನೇ ಸಾಲಿಗೆ 28 ಶಿಕ್ಷಣ ಸಂಸ್ಥೆಗಳಿಗೆ ಪ್ರೌಢ ಶಾಲೆ ತೆರೆಯಲು ಶಿಪಾರಸ್ಸು ಮಾಡಿತ್ತು. ಆದರೆ 1987 ರಿಂದೀಚೆಗೆ ಸರ್ಕಾರವು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಪ್ರೌಢ ಶಾಲೆಗಳನ್ನು ತೆರೆಯಲು ಅನುಮತಿಯನ್ನು ಶಾಶ್ವತ ಅನುಧಾನ ರಹಿತ ಷರತ್ತಿನ ಮೇಲೆ ನೀಡುತ್ತಿರುವುದರಿಂದ ಈ ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ ಸರ್ಕಾರಿ ಪತ್ರ ಸಂಖ್ಯೆ : ಇಡಿ 274 ಎಸ್‌ಇಎಸ್ 91 ದಿನಾಂಕ 18-9-1ರಲ್ಲಿ ರೂ. 10-00ರ ಛಾಪ ಕಾಗದದಲ್ಲಿ ಸರ್ಕಾರದಿಂದ ಶಾಶ್ವತವಾಗಿ ಅನುಧಾನವನ್ನು ಬಯಸುವುದಿಲ್ಲವೆಂದು ಒಪ್ಪಿಗೆ ಪತ್ರವನ್ನು ನೀಡಬೇಕೆಂದು ಕೋರಲಾಗಿತ್ತು. ಆದರಂತೆ 6 ಶಿಕ್ಷಣ ಸಂಸ್ಥೆಗಳು ಮಾತ್ರ ಒಪ್ಪಿಗೆ ಪತ್ರ ನೀಡಿರುವುದರಿಂದ ಅವುಗಳಿಗೆ ಪ್ರೌಢ ಶಾಲೆ ತೆರೆಯಲು ಅನುಮತಿ ನೀಡಲಾಗಿದೆ. ಉಳಿದ ಶಿಕ್ಷಣ ಸಂಸ್ಥೆಗಳು ಒಪ್ಪಿಗೆ ಪತ್ರ ನೀಡಿಲ್ಲವಾದ್ದರಿಂದ ಆ ಸಂಸ್ಥೆಗಳಿಗೆ ಪ್ರೌಢ ಶಾಲೆ ಪ್ರಾರಂಭಿಸಲು ಅನುಮತಿ ನೀಡಿಲ್ಲ. ಶಿಕ್ಷಣ ಸಂಸ್ಥೆಗಳಿಗೆ 1987 ರಿಂದ ಶಾಶ್ವತ ಅನುಧಾನ ರಹಿತ ಷರತ್ತಿನ ಮೇಲೆ ಪ್ರೌಢ ಶಾಲೆ ತೆರೆಯಲು ಅನುಮತಿ ನೀಡುವ ರಾಜ್ಯ ಸರ್ಕಾರದ ನೀತಿಯು ಎಲ್ಲಾ ಶಿಕ್ಷಣ ಸಂಸ್ಥೆಗಳಿಗೂ ಅನ್ವಯಿಸುತ್ತದೆ. ಆದ್ದರಿಂದ ಈ ಶಿಕ್ಷಣ ಸಂಸ್ಥೆಗಳಿಗೆ ಅನುಧಾನ ನೀಡಿ ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿಗೆ ಎಲ್ಲಾ ಸೇವಾ ಸೌಲಭ್ಯಗಳನ್ನು ನೀಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

(2) ಬೈಲಹೊಂಗಲದಲ್ಲಿ ಉರ್ದು ಪ್ರಾಥಮಿಕ ಶಾಲೆಗೆ ಕಟ್ಟಡ.

ಶ್ರೀ ಶಿವಾನಂದ ಹೆಚ್. ಕೌಜಲಗಿ : (ಬೈಲಹೊಂಗಲ) ಸನ್ಮಾನ್ಯ ಉಪಾಧ್ಯಕ್ಷೆಯವರೆ, ಬೆಳಗಾಂ ಜಿಲ್ಲೆ ಬೈಲಹೊಂಗಲ ನಗರದಲ್ಲಿ ಉರ್ದು ಪ್ರಾಥಮಿಕ ಶಾಲೆಯ ಕಟ್ಟಡವು ಇರುವುದಿಲ್ಲ. ಉರ್ದು ವಿದ್ಯಾರ್ಥಿಗಳು ಒಂದು